**9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್.ಸಿ.ನಂ.137/2020**

(ಚಾ.ಸಾ.15/ಪ್ರಾ.ಸಾ.8)

ತಾಃ 22.07.2025 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು: | ಭಾಸ್ಕರಾಚಾರಿ |
| ತಂದೆಯ ಹೆಸರು | ಬಸವರಾಜಾಚಾರಿ |
| ವಯಸ್ಸು | 48 ವರ್ಷ |
| ಉದ್ಯೋಗ | ಖಾಸಗಿ ಕೆಲಸ |
| ವಾಸ ಸ್ಥಳ | ಮಂಗಳವಾರಪೇಟೆ, ಚನ್ನಪಟ್ಟಣ |

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ಮೃತ ಪ್ರಸನ್ನ ಕುಮಾರ ನನ್ನ ಅಕ್ಕನ ಮಗ. ಸುಮಾರು 5 ವರ್ಷಗಳ ಹಿಂದೆ ನನ್ನ ಅಕ್ಕನ ಮಗ ಮರಣ ಹೊಂದಿದ್ದು ಅವರ ಮೃತದೇಹವು ವಿಕ್ಟೋರಿಯಾ ಆಸ್ಪತ್ರೆಯ ಶವಾಗಾರದಲ್ಲಿ ಇದ್ದು ನಾನು ಆಸ್ಪತ್ರೆಯ ಬಳಿ ಹೋದಾಗ ಸಂಜೆ 6.00 ಗಂಟೆ ಆಗಿತ್ತು. ಮೃತದೇಹವನ್ನು ಪಡೆದುಕೊಳ್ಳಲು ಒಂದು ದಾಖಲೆಗೆ ಪೊಲೀಸರು ನನ್ನ ಸಹಿ ಪಡೆದಿರುತ್ತಾರೆ. ಮೃತನ ದೇಹದ ಮೇಲೆ ಗಾಯಗಳು ಆಗಿರುವುದನ್ನು ನಾನು ನೋಡಿರುವುದಿಲ್ಲ. ನನ್ನ ಅಕ್ಕನ ಮಗನನ್ನು ಅವರ ಸ್ನೇಹಿತರು ಕರೆದುಕೊಂಡು ಹೋಗಿ ಏನೋ ಮಾಡಿದ್ದಾರೆ ಎಂದು ಚಾಸಾ.8 ರವರು ನನಗೆ ತಿಳಿಸಿರುತ್ತಾರೆ. ಈಗ ನೋಡಿದ ಶವ

ಪಂಚನಾಮೆಯನ್ನು ನನ್ನ ಸಹಿ ಇದೆ. ಶವ ಪಂಚನಾಮೆಯನ್ನು ನಿ.ಪಿ.19 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.19(ಎ) ಎಂದು ಗುರುತಿಸಲಾಯಿತು. ಶವ ಪಂಚನಾಮೆಯಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪೊಲೀಸರಿಗೆ ನಾನು ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಅನುಮತಿ ನೀಡಲಾಯಿತು.)

**<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ</u>**

2. ನಾನು 10ನೇ ತರಗತಿಯವರೆಗೆ ವ್ಯಾಸಂಗ ಮಾಡಿದ್ದೇನೆ. ನನಗೆ ಓದು ಮತ್ತು ಬರಹ ಬರುತ್ತದೆ. ನಿ.ಪಿ.19 ಕ್ಕೆ ನಾನು ಸಹಿ ಮಾಡುವಾಗ ಬರವಣಿಗೆ ಮಾಡಿದ ಬಗ್ಗೆ ನಾನು ಗಮನಿಸಲಿಲ್ಲ. ನಾನು ಸಾಮಾನ್ಯವಾಗಿ ಓದಿ ಸಹಿ ಮಾಡುತ್ತೇನೆ ಎಂದರೆ ಸರಿ. ಓದಿ ತಿಳಿದುಕೊಂಡು ಸಹಿ ಮಾಡಲು ತೊಂದರೆ ಇರಲಿಲ್ಲ. ದಿಃ18.02.2020 ರಂದು ಸಂಜೆ 4.00 ಗಂಟೆಗೆ ಪೊಲೀಸರು ಶವಾಗಾರದ ಬಳಿ ನನ್ನನ್ನು ಮತ್ತು ಚಾಸಾ.16 ಮತ್ತು 17 ರವರನ್ನು ಕರೆಸಿ ಮೃತ ಪ್ರಸನ್ನ ಕುಮಾರ್ ರವರ ಶವವನ್ನು ತೋರಿಸಿ ಶವ ಪಂಚನಾಮೆ ಮಾಡುವ ಸಂಬಂಧ ನಮ್ಮ ಸಮಕ್ಷಮ ಸಂಜೆ 4.15 ರಿಂದ 6.15 ರವರೆಗೆ ನಿ.ಪಿ.19 ರಂತೆ ಪಂಚನಾಮೆ ಮಾಡಿ ನನ್ನ ಸಹಿ ಪಡೆದಿದ್ದಾರೆ ಎಂದರೆ ಸುಳ್ಳು. ನಾನು ಶವವನ್ನು ನೋಡಿದಾಗ ಮೃತನ ಬಾಯಿಯಲ್ಲಿ ಮತ್ತು ಮೂಗಿನಿಂದ ರಕ್ತ ಬರುತ್ತಿತ್ತು, ದೇಹದ ಮೇಲೆ ತರಚಿದ ಹಾಗೂ ರಕ್ತ ಹೆಪ್ಪುಗಟ್ಟಿದ ಗಾಯಗಳು ಇದ್ದವು ಎಂದರೆ ಸರಿಯಲ್ಲ. ಆರೋಪಿಗಳು ಪ್ರಸನ್ನ ಕುಮಾರ್ ರವರು ಮೊಬೈಲ್ ಕಳ್ಳತನ ಮಾಡಿದ್ದಾರೆ ಎಂದು ಕರೆದುಕೊಂಡು ಹೋಗಿ ಹಲ್ಲೆ ಮಾಡಿ, ಕೊಲೆ ಮಾಡಿದ್ದಾರೆ ಎಂದು ನನಗೆ ತಿಳಿದು ಬಂತು ಎಂದರೆ ಸರಿಯಲ್ಲ. ಈ ಮೇಲ್ಕಂಡಂತೆ ನಾನು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ

ಹೇಳಿಕೆಯನ್ನು ನಿ.ಪಿ.20 ಎಂದು ಗುರುತಿಸಲಾಯಿತು. ನಿ.ಪಿ.19 ರ ಶವ ಪಂಚನಾಮೆಯ ವಿಚಾರಗಳು ಮತ್ತು ನಿ.ಪಿ.20 ರಂತೆ ಹೇಳಿಕೆ ನೀಡಿದ್ದರೂ ಸಹ ಈಗ ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಿಂದಃಏನು ಇಲ್ಲ.**

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.)

ಓ. ಹೇ. ಕೇ. ಸ. ಸಹಿ ಮಾಡಿದ್ದಾರೆ.

(ವಿಜಯ್ ಕುಮಾರ್)
9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.